# ಸಂಯುಕ್ತ ಸಹಕಾರಿಯ ಉಪವಿಧಿ ತಿದ್ದುಪಡಿ ಪ್ರಸ್ತಾವನೆ:

| ಕ್ರಸಂ | ಪ್ರಸ್ತುತವಿರುವ ಉಪವಿಧಿ ಸಂಖ್ಯೆ | ತಿದ್ದುಪಡಿ ನಂತರ ಉಪವಿಧಿ ಸಂಖ್ಯೆ | ಪ್ರಸ್ತುತವಿರುವ ಪ್ರಾವಧಾನ | ತಿದ್ದುಪಡಿಯ ನಂತರದ ಪ್ರಾವಧಾನ | ತಿದ್ದುಪಡಿಗೆ ಕಾರಣ |
|---|---|---|---|---|---|
| 1 | 21(2) | 21(2) | ಮೇಲಿನ ಪ್ರತಿ ಪ್ರಾಂತವು ಸಹ ಒಂದು ಪ್ರತ್ಯೇಕ ಮತಕ್ಷೇತ್ರ ಆಗಿರತಕ್ಕದ್ದು. ಸಂಯುಕ್ತ ಸಹಕಾರಿಯ ಮಂಡಲಿಯ ಚುನಾವಣೆಯಲ್ಲಿ ಪ್ರತಿ ಪ್ರಾಂತದಿಂದ ಚುನಾಯಿಸಬೇಕಾದ ನಿರ್ದೇಶಕರ ಸಂಖ್ಯೆಯು, ಚುನಾವಣೆಯ ಅಧಿಸೂಚನೆಯ ದಿನದಂದು ಆ ಪ್ರಾಂತದಲ್ಲಿನ ಒಟ್ಟು ಸದಸ್ಯ ಸಹಕಾರಿಗಳ ಸಂಖ್ಯೆಗೆ ಅನುಗುಣವಾಗಿ ಸಮೀಪದ ಅನುಪಾತದಲ್ಲಿ ಇರತಕ್ಕದ್ದು. ಆದರೆ ಜಿಲ್ಲೆಗೆ ಒಬ್ಬರಿಗಿಂತ ಹೆಚ್ಚಿಗೆ ನಿರ್ದೇಶಕರು ಇರತಕ್ಕದ್ದಲ್ಲ ಮತ್ತು ಯಾವುದೇ ಪ್ರಾಂತದಿಂದ ಆಯ್ಕೆಯಾಗುವ ನಿರ್ದೇಶಕರ ಸಂಖ್ಯೆಯು ಒಟ್ಟು ಚುನಾಯಿತ ನಿರ್ದೇಶಕರ ಸಂಖ್ಯೆಯ ಮೂರನೇ ಒಂದರಷ್ಟನ್ನು ಮೀರತಕ್ಕದ್ದಲ್ಲ. | ಮೇಲಿನ ಪ್ರತಿ ಪ್ರಾಂತವು ಸಹ ಒಂದು ಪ್ರತ್ಯೇಕ ಮತಕ್ಷೇತ್ರ ಆಗಿರತಕ್ಕದ್ದು. ಸಂಯುಕ್ತ ಸಹಕಾರಿಯ ಮಂಡಲಿಯ ಚುನಾವಣೆಯಲ್ಲಿ ಪ್ರತಿ ಪ್ರಾಂತದಿಂದ ಚುನಾಯಿಸಬೇಕಾದ ನಿರ್ದೇಶಕರ ಸಂಖ್ಯೆಯು, ಚುನಾವಣೆಯ ಅಧಿಸೂಚನೆಯ ದಿನದಂದು ಆ ಪ್ರಾಂತದಲ್ಲಿನ ಒಟ್ಟು ಸದಸ್ಯ ಸಹಕಾರಿಗಳ ಸಂಖ್ಯೆಗೆ ಅನುಗುಣವಾಗಿ ಸಮೀಪದ ಅನುಪಾತದಲ್ಲಿ ಇರತಕ್ಕದ್ದು. ಆದರೆ ಜಿಲ್ಲೆಗೆ ಒಬ್ಬರಿಗಿಂತ ಹೆಚ್ಚಿಗೆ ನಿರ್ದೇಶಕರು **ಚುನಾಯಿತರಾಗತಕ್ಕದ್ದಲ್ಲ** ಮತ್ತು ಯಾವುದೇ ಪ್ರಾಂತದಿಂದ ಆಯ್ಕೆಯಾಗುವ ನಿರ್ದೇಶಕರ ಸಂಖ್ಯೆಯು ಒಟ್ಟು ಚುನಾಯಿತ ನಿರ್ದೇಶಕರ ಸಂಖ್ಯೆಯ ಮೂರನೇ ಒಂದರಷ್ಟನ್ನು ಮೀರತಕ್ಕದ್ದಲ್ಲ. | ಪ್ರಾವಧಾನದಲ್ಲಿ ಹೆಚ್ಚಿನ ಸ್ಪಷ್ಟತೆ ತರುವ ಉದ್ದೇಶದಿಂದ |
| 2 | **ಹೊಸ ಸೇರ್ಪಡೆ** | 23ಎ | ಹೊಸ ಸೇರ್ಪಡೆ | **ಮಂಡಲಿ ಸದಸ್ಯರಿಂದ ಪ್ರಮಾಣ ವಚನ ಸ್ವೀಕಾರ:**<br><br>ಸಂಯುಕ್ತ ಸಹಕಾರಿಯ ನಿರ್ದೇಶಕರ ಸಾಮಾನ್ಯ ಚುನಾವಣೆಯ ನಂತರದಲ್ಲಿ ಸಮಾವೇಶಗೊಳ್ಳುವ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಆಡಳಿತ ಮಂಡಲಿ ನಿರ್ದಿಷ್ಟಪಡಿಸಿದ ನಮೂನೆಯಲ್ಲಿ ಮಂಡಲಿ ಸದಸ್ಯರು ಪ್ರಮಾಣ ವಚನವನ್ನು ಸ್ವೀಕರಿಸತಕ್ಕದ್ದು. | ಸಹಕಾರ ತತ್ವದ ಪರಿಣಾಮಕಾರಿ ಆಚರಣೆ ಮತ್ತು ಮಂಡಲಿ ಸದಸ್ಯರುಗಳ ಉತ್ತರದಾಯಿತ್ವವನ್ನು ಹೆಚ್ಚಿಸುವ ದೃಷ್ಟಿಯಿಂದ. |
| 3 | 34 | 34 | **ನಿರ್ದೇಶಕರ ಭತ್ಯೆಗಳು:**<br>ಮಂಡಲಿಯ ಸದಸ್ಯರು ಮಂಡಲಿಯ ಅಥವಾ ಸಮಿತಿಯ | **ನಿರ್ದೇಶಕರ ಭತ್ಯೆಗಳು:**<br>1. ಮಂಡಲಿಯ ಸದಸ್ಯರು ಮಂಡಲಿಯ ಅಥವಾ | ಪ್ರಸಕ್ತ ದಿನಮಾನಗಳಲ್ಲಿ ಉಂಟಾಗಿರುವ ಬೆಲೆ ವ್ಯತ್ಯಾಸದ |

| | | | | | |
|---|---|---|---|---|---|
| | | | ಸಭೆಗಳಲ್ಲಿ ಭಾಗವಹಿಸಿದಾಗ ರೂ.1000/- ಸಭಾಭತ್ಯೆಯನ್ನು ಪಡೆಯಲು ಅರ್ಹರಿರುತ್ತಾರೆ. ಅಲ್ಲದೇ, ಸಂಯುಕ್ತ ಸಹಕಾರಿಯ ಅಧಿಕೃತ ಕಾರ್ಯ ನಿಮಿತ್ತ ಪ್ರವಾಸದ ಸಂದರ್ಭದಲ್ಲಿ ದಿನವೊಂದಕ್ಕೆ ರೂ.1000/- ದಿನಭತ್ಯೆಯನ್ನು ಪಡೆಯಲು ಮತ್ತು ವಾಸ್ತವಿಕ ಪ್ರಯಾಣದ ವೆಚ್ಚವನ್ನು ಮರುಪಾವತಿ ಪಡೆಯಲು ಅಥವಾ ಸ್ವಂತ ವಾಹನದಲ್ಲಿ ಪ್ರಯಾಣಿಸಿದಲ್ಲಿ ಪ್ರತಿ ಕಿಲೋಮೀಟರಿಗೆ ರೂ.11/-ರಂತೆ ಪ್ರಯಾಣ ಭತ್ಯೆ ಪಡೆಯಲು ಅರ್ಹರಿರುತ್ತಾರೆ.<br>ಅಧ್ಯಕ್ಷರು ಮಾಹೆಯಾನ ರೂ.15,000.00 ಗೌರವಧನ ಪಡೆಯಲು ಅರ್ಹರಿರುತ್ತಾರೆ. ಅಲ್ಲದೇ, ಅನಿಯಮಿತ ಇಂಧನದೊಂದಿಗೆ ವಾಹನ ಸೌಲಭ್ಯ ಹೊಂದಲು ಅರ್ಹರಿರುತ್ತಾರೆ. ಅಧ್ಯಕ್ಷರು ಮಾಸಿಕ 25,000.00ಗಳ ಮಿತಿಗೊಳಪಟ್ಟು ಮನೆಬಾಡಿಗೆ ಪಡೆಯಲು ಅರ್ಹರಿರುತ್ತಾರೆ. ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಅನಿಯಮಿತ ದೂರವಾಣಿ ಮತ್ತು ಇಂಟರ್ನೆಟ್ ಸೌಲಭ್ಯ ಹೊಂದಲು ಅರ್ಹರಿರುತ್ತಾರೆ. | ಸಮಿತಿಯ ಸಭೆಗಳಲ್ಲಿ ಭಾಗವಹಿಸಿದಾಗ **ರೂ.2000/- ಸಭಾಭತ್ಯೆಯನ್ನು** ಪಡೆಯಲು ಅರ್ಹರಿರುತ್ತಾರೆ ಮತ್ತು ಸಂಯುಕ್ತ ಸಹಕಾರಿಯ ಅಧಿಕೃತ ಕಾರ್ಯ ನಿಮಿತ್ತ ಪ್ರವಾಸದ ಸಂದರ್ಭದಲ್ಲಿ ದಿನವೊಂದಕ್ಕೆ **ರೂ.2000/- ತಂಗುಭತ್ಯೆಯನ್ನು ಪಡೆಯಲು ಮತ್ತು ಬಸ್ಸಿನಲ್ಲಿ ಪ್ರಯಾಣಿಸಿದರೆ ಹವಾನಿಯಂತ್ರಿತ ಸ್ಲೀಪರ್ ಬಸ್ ಅಥವಾ ರೈಲಿನಲ್ಲಿ ಹವಾ ನಿಯಂತ್ರಿತ ಪ್ರಥಮ ದರ್ಜೆ, ವಿಮಾನದಲ್ಲಿ 'ಎಕಾನಮಿ ಕ್ಲಾಸ್' ಮಿತಿಗೊಳಪಟ್ಟು ವಾಸ್ತವಿಕ ಪ್ರಯಾಣದ ವೆಚ್ಚವನ್ನು** ಮರುಪಾವತಿ ಪಡೆಯಲು ಅಥವಾ ಸ್ವಂತ ವಾಹನದಲ್ಲಿ ಪ್ರಯಾಣಿಸಿದಲ್ಲಿ **ಪ್ರತಿ ಕಿಲೋಮೀಟರಿಗೆ ರೂ.12/-**ರಂತೆ ಪ್ರಯಾಣ ಭತ್ಯೆ ಪಡೆಯಲು ಅರ್ಹರಿರುತ್ತಾರೆ.<br>2. ಮಂಡಲಿ ಸದಸ್ಯರು ಇಂಟರ್ನೆಟ್ ಸಂಪರ್ಕವನ್ನು ಒಳಗೊಂಡ ಟ್ಯಾಬ್ ಸೌಲಭ್ಯವನ್ನು ಪಡೆಯಲು ಅರ್ಹರಿರುತ್ತಾರೆ.<br>3. ಅಧ್ಯಕ್ಷರು ಮಾಹೆಯಾನ **ರೂ.30,000/-** ಗೌರವಧನ ಪಡೆಯಲು ಅರ್ಹರಿರುತ್ತಾರೆ. ಅಲ್ಲದೇ, ಅನಿಯಮಿತ ಇಂಧನದೊಂದಿಗೆ ವಾಹನ ಸೌಲಭ್ಯ ಹೊಂದಲು ಅರ್ಹರಿರುತ್ತಾರೆ. ಅಧ್ಯಕ್ಷರು **ಮಾಸಿಕ 50,000/-** ರೂ.ಗಳ ಮನೆಬಾಡಿಗೆ ಭತ್ಯೆ ಪಡೆಯಲು ಅರ್ಹರಿರುತ್ತಾರೆ. ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಅನಿಯಮಿತ ದೂರವಾಣಿ ಮತ್ತು ಇಂಟರ್ನೆಟ್ ಸೌಲಭ್ಯ ಹೊಂದಲು ಅರ್ಹರಿರುತ್ತಾರೆ. | ಕಾರಣದಿಂದ ಮತ್ತು ಮಾಹಿತಿ ತಂತ್ರಜ್ಞಾನವನ್ನು ಉಪಯೋಗಿಸಿಕೊಂಡು ಸದಸ್ಯ ಸಹಕಾರಿಗಳಿಗೆ ಪರಿಣಾಮಕಾರಿ ಸೇವೆಯನ್ನು ಒದಗಿಸುವ ದೃಷ್ಟಿಯಿಂದ |
| **4** | **35ಎ** | **35ಎ** | **ಪ್ರಾಂತೀಯ ನಿರ್ದೇಶಕರ ಸಮಿತಿ:**<br>1. ಪ್ರತಿಯೊಂದು ಪ್ರಾಂತಕ್ಕೆ ಸಂಬಂಧಿಸಿದಂತೆ ಆ ಪ್ರಾಂತದ ಸದಸ್ಯ ಸಹಕಾರಿಗಳಿಗೆ ಸಂಬಂಧಿಸಿದಂತೆ ಸಂಯುಕ್ತ ಸಹಕಾರಿಯು ನಿರ್ವಹಿಸಬೇಕಾದ ಶಾಸನಾತ್ಮಕ ಅಧಿಕಾರ/ಕರ್ತವ್ಯಗಳ ಕುರಿತು ಚರ್ಚಿಸಿ ಸಂಭಾವ್ಯ ಕ್ರಮವನ್ನು ಮಂಡಲಿಗೆ ಶಿಫಾರಸ್ಸು ಮಾಡಲು ಮತ್ತು ಸಂಯುಕ್ತ ಸಹಕಾರಿಯ ಕರ್ತವ್ಯಗಳನ್ನು ತ್ವರಿತವಾಗಿ ನಿರ್ವಹಿಸಲು ಪ್ರಾಂತೀಯ ನಿದೇಶಕರ ಸಮಿತಿ ಇರತಕ್ಕದ್ದು. | **ಪ್ರಾಂತೀಯ ನಿರ್ದೇಶಕರ ಸಮಿತಿ:**<br>1. ಪ್ರತಿಯೊಂದು ಪ್ರಾಂತಕ್ಕೆ ಸಂಬಂಧಿಸಿದಂತೆ ಒಂದು ಪ್ರಾಂತೀಯ ನಿದೇಶಕರ ಸಮಿತಿ ಇರತಕ್ಕದ್ದು.<br>2. **ಪ್ರಾಂತೀಯ ನಿರ್ದೇಶಕರ ಸಮಿತಿಯ ರಚನೆ:** ಪ್ರಾಂತೀಯ ನಿರ್ದೇಶಕರ ಸಮಿತಿಯು ಈ ಕೆಳಗಿನವರುಗಳನ್ನು ಒಳಗೊಂಡಿರತಕ್ಕದ್ದು.<br>ಅ) ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯ ಸದಸ್ಯರಾಗಿ ಹೆಚ್ಚು ವರ್ಷಗಳ ಕಾಲ ಸೇವೆ ಸಲ್ಲಿಸಿರುವ ಓರ್ವ ನಿರ್ದೇಶಕರು ಸಮಿತಿಯ | ಸಂಯುಕ್ತ ಸಹಕಾರಿಯ ಚಟುವಟಿಕೆಯನ್ನು ಇನ್ನಷ್ಟು ಪರಿಣಾಮಕಾರಿಯಾಗಿಸುವ ದೃಷ್ಟಿಯಿಂದ |

| | | | | | |
|---|---|---|---|---|---|
| | | | 2. ಪ್ರಾಂತೀಯ ನಿರ್ದೇಶಕರ ಸಮಿತಿಯ ರಚನೆ:<br>1. ಸಂಯುಕ್ತ ಸಹಕಾರಿಯ ಅಧ್ಯಕ್ಷರು ಅಧ್ಯಕ್ಷರು<br>2. ಆ ಪ್ರಾಂತದಲ್ಲಿನ ಎಲ್ಲಾ ನಿರ್ದೇಶಕರು/ವಿಷಯ ತಜ್ಞರು ಸದಸ್ಯರು<br>3. ವ್ಯವಸ್ಥಾಪಕ ನಿರ್ದೇಶಕರು ಸದಸ್ಯ ಕಾರ್ಯದರ್ಶಿ<br>4. ಪ್ರಕಾರ್ಯಗಳು, ಅಧಿಕಾರಗಳು ಮತ್ತು ಕರ್ತವ್ಯಗಳು:<br>1. ಆ ಪ್ರಾಂತದ ಸದಸ್ಯ ಸಹಕಾರಿಗಳಿಗೆ ಸಂಬಂಧಿಸಿದಂತೆ ಸಂಯುಕ್ತ ಸಹಕಾರಿಯು ನಿರ್ವಹಿಸಬೇಕಾದ ಶಾಸನಾತ್ಮಕ ಅಧಿಕಾರ/ಕರ್ತವ್ಯಗಳ ಕುರಿತು ಚರ್ಚಿಸಿ ಸಂಭಾವ್ಯ ಕ್ರಮವನ್ನು ಮಂಡಲಿಗೆ ಶಿಫಾರಸ್ಸು ಮಾಡುವುದು. ಪರಂತು, ಯಾವುದೇ ವಿಷಯದ ಕುರಿತು ಅಂತಿಮ ನಿರ್ಣಯ/ತೀರ್ಮಾನ ಆಡಳಿತ ಮಂಡಲಿಯದಾಗಿರುತ್ತದೆ.<br>2. ಸಹಕಾರ ಚಳುವಳಿಗೆ ತೀವ್ರ ರೀತಿಯಲ್ಲಿ ಹಾನಿಯುಂಟಾಗುವ ಸಂಭವವಿದ್ದಲ್ಲಿ ಅಥವಾ ತುರ್ತು ಕ್ರಮದ ಅವಶ್ಯಕತೆಯಿದ್ದಲ್ಲಿ, ಮಂಡಲಿಯ ಅನುಮೋದನೆಗೆ ಒಳಪಟ್ಟು, ಸೂಕ್ತ ಕ್ರಮ ತೆಗೆದುಕೊಳ್ಳತಕ್ಕದ್ದು. ಪರಂತು, ಇಂತಹ ನಿರ್ಣಯಗಳು, ಮಂಡಲಿಯು ನೀಡುವ ಮಾರ್ಗದರ್ಶಿಗಳಿಗೆ ಒಳಪಟ್ಟಿರತಕ್ಕದ್ದು.<br>3. ಮಂಡಲಿಯು ನಿರ್ಣಯದ ಮೂಲಕ ಪ್ರಾಧಿಕೃತವಾದ ಇತರೆ ಯಾವುದೇ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.<br>4. ಮಂಡಲಿಯ ಸಭೆಯನ್ನು ನಡೆಸುವ ಕಾರ್ಯವಿಧಾನವು ಯಥೋಚಿತ ವ್ಯತ್ಯಾಸಗಳೊಂದಿಗೆ ಪ್ರಾಂತೀಯ ನಿರ್ದೇಶಕರ ಸಮಿತಿ ಸಭೆಗಳನ್ನು ನಡೆಸುವುದಕ್ಕೆ | ಸಂಚಾಲಕರಾಗಿರತಕ್ಕದ್ದು. ಪರಂತು ಇಬ್ಬರು ಆಡಳಿತ ಮಂಡಲಿ ಸದಸ್ಯರುಗಳು ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯ ಸದಸ್ಯರಾಗಿ ಸೇವೆ ಸಲ್ಲಿಸಿರುವ ವರ್ಷಗಳು ಸಮವಾಗಿದ್ದಲ್ಲಿ, ಆಡಳಿತ ಮಂಡಲಿಯು ಸಂಚಾಲಕರನ್ನು ನಾಮನಿರ್ದೇಶಿಸತಕ್ಕದ್ದು. ಸಂಯುಕ್ತ ಸಹಕಾರಿಯ ಅಧ್ಯಕ್ಷರು ಅಥವಾ ಉಪಾಧ್ಯಕ್ಷರು ಪ್ರತಿನಿಧಿಸುವ ಪ್ರಾಂತಕ್ಕೆ ಸಂಬಂಧಿಸಿದಂತೆ ಅಧ್ಯಕ್ಷರು ಅಥವಾ ಉಪಾಧ್ಯಕ್ಷರೇ ಸಮಿತಿಯ ಸಂಚಾಲಕರಾಗಿರಕ್ಕದ್ದು. ಮತ್ತೂ ಪರಂತು ಸಂಯುಕ್ತ ಸಹಕಾರಿಯ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಒಂದೇ ಪ್ರಾಂತವನ್ನು ಪ್ರತಿನಿಧಿಸುತ್ತಿದ್ದಲ್ಲಿ ಅಧ್ಯಕ್ಷರೇ ಸಮಿತಿಯ ಸಂಚಾಲಕರಾಗಿರತಕ್ಕದ್ದು. ಸಂಚಾಲಕರು ಸಮಿತಿ ಸಭೆಯ ಅಧ್ಯಕ್ಷತೆಯನ್ನು ವಹಿಸತಕ್ಕದ್ದು. ಸಂಚಾಲಕರ ಅನುಪಸ್ಥಿತಿಯಲ್ಲಿ ಸಮಿತಿಯ ಸದಸ್ಯರು ನಿರ್ಣಯಿಸುವ ಸದಸ್ಯನೊರ್ವನು ಸಭೆಯ ಅಧ್ಯಕ್ಷತೆಯನ್ನು ವಹಿಸಿತಕ್ಕದ್ದು.<br>ಆ) ಸಭೆಯ ಅಜೆಂಡಾ ಮತ್ತು ಟಿಪ್ಪಣಿಯನ್ನು ಮೂರು ದಿನಗಳ ಮುಂಚಿತವಾಗಿ ಸಮಿತಿಯ ಎಲ್ಲಾ ಸದಸ್ಯರಿಗೆ ಕಳುಹಿಸತಕ್ಕದ್ದು.<br>ಇ) ಆಯಾ ಪ್ರಾಂತದಿಂದ ಚುನಾಯಿತರಾದ ಆಡಳಿತ ಮಂಡಲಿಯ ಎಲ್ಲ ಸದಸ್ಯರು ಸಮಿತಿಯ ಸದಸ್ಯರಾಗಿರತಕ್ಕದ್ದು.<br>ಈ) ಆಯಾ ವಿಭಾಗದ ವಿಭಾಗೀಯ ಅಧಿಕಾರಿ ಅಥವಾ ಆ ಹುದ್ದೆಯಲ್ಲಿರುವ ವ್ಯಕ್ತಿಯು ಸಮಿತಿಯ ಸದಸ್ಯ ಕಾರ್ಯದರ್ಶಿಯಾಗಿರತಕ್ಕದ್ದು.<br>**3. ಕೋರಂ:**<br>ಸಮಿತಿಯ ಕೋರಂ ಚುನಾಯಿತ ಸದಸ್ಯರ ಶೇಕಡಾ 50ರಷ್ಟು ಇರತಕ್ಕದ್ದು.<br>**4. ಸಮಿತಿಯ ಪ್ರಕಾರ್ಯಗಳು, ಅಧಿಕಾರಗಳು ಮತ್ತು** | |

| | | | | | |
|---|---|---|---|---|---|
| | | | ಅನ್ವಯವಾಗತಕ್ಕದ್ದು. ಪ್ರಾಂತೀಯ ನಿರ್ದೇಶಕರ ಸಮಿತಿ ನಿರ್ದೇಶಕರ ಸಮಿತಿ ಸಭೆಗಳನ್ನು ಆಯಾ ಪ್ರಾಂತಗಳಲ್ಲಿಯೇ ನಡೆಸುವುದು. | **ಕರ್ತವ್ಯಗಳು:**<br>ಅ) ಆ ಪ್ರಾಂತದ ಸದಸ್ಯ ಸಹಕಾರಿಗಳಿಗೆ ಸಂಬಂಧಿಸಿದಂತೆ ಸಂಯುಕ್ತ ಸಹಕಾರಿಯು ನಿರ್ವಹಿಸಬೇಕಾದ ಶಾಸನಾತ್ಮಕ ಅಧಿಕಾರ/ ಕರ್ತವ್ಯಗಳ ಕುರಿತು ಚರ್ಚಿಸಿ ಸಂಭಾವ್ಯ ಕ್ರಮವನ್ನು ಕಾರ್ಯಕಾರಿ ಸಮಿತಿಗೆ ಶಿಫಾರಸ್ಸು ಮಾಡತಕ್ಕದ್ದು.<br>ಆ) ನಿಗದಿತ ಅವಧಿಯೊಳಗೆ ಶಿಕ್ಷಣ ನಿಧಿ, ವಾರ್ಷಿಕ ಶುಲ್ಕ ಪಾವತಿಸದಿರುವ ಸಹಕಾರಿಯ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಲು ನಿರ್ಣಯಿಸುವುದು.<br>ಇ) ಕಾಯ್ದೆ ಕಲಂ 34ರಡಿಯ ವಿದ್ಯುಕ್ತ ಮಾಹಿತಿಯನ್ನು ನಿಗದಿತ ಅವಧಿಯೊಳಗೆ ಸಲ್ಲಿಸದಿರುವ ಸಹಕಾರಿಯ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಲು ನಿರ್ಣಯಿಸುವುದು.<br>ಈ) ನಿಗದಿತ ಅವಧಿಯೊಳಗೆ ವಾರ್ಷಿಕ ಸಾಮಾನ್ಯ ಸಭೆ ಅಥವಾ ಲೆಕ್ಕಪರಿಶೋಧನೆ ನಡೆಸದಿರುವ ಸಹಕಾರಿಯ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಲು ನಿರ್ಣಯಿಸುವುದು.<br>ಉ) ಸೌಹಾರ್ದ ಸಹಕಾರಿಗಳ ಸಂಖ್ಯೆ ಕಡಿಮೆ ಇರುವ ಪ್ರಾಂತ/ಜಿಲ್ಲೆಗಳಲ್ಲಿ ಸಹಕಾರಿಗಳ ಪ್ರಾರಂಭಕ್ಕೆ ಉತ್ತೇಜನಕಾರಿ ಕ್ರಮಗಳನ್ನು ಕೈಗೊಳ್ಳುವುದು/ಕ್ರಿಯಾಯೋಜನೆಯನ್ನು ರೂಪಿಸುವುದು.<br>ಊ)ಸೌಹಾರ್ದ ಸಹಕಾರಿಗಳ ಸಂಖ್ಯೆ ಗಣನೀಯವಾಗಿರುವ ಜಿಲ್ಲೆ/ಪ್ರಾಂತದಲ್ಲಿ ಸಹಕಾರಿಗಳ ಗುಣಾತ್ಮಕ ಬೆಳವಣಿಗೆಗೆ ಅಗತ್ಯವಾದ ಕ್ರಮಗಳನ್ನು ತೆಗೆದುಕೊಳ್ಳುವುದು.<br>ಋ) ಸಹಕಾರಿಗಳ ಸಮಸ್ಯೆ, ದೂರುಗಳ ಕುರಿತು ಸ್ಪಂದನೆ ಮತ್ತು ನಿವಾರಣೆಗೆ ಅಗತ್ಯ ಕ್ರಮವಹಿಸುವುದು.<br>ಎ) ಸಹಕಾರಿಯ ಕುರಿತು ಠೇವಣಿದಾರರ ಫಿರ್ಯಾದಿ | |

| | | | | | |
|---|---|---|---|---|---|
| | | | | ಇರುವಲ್ಲಿ ಠೇವಣಿದಾರರ ಹಿತರಕ್ಷಣೆಗೆ ಅಗತ್ಯ ಕ್ರಮವಹಿಸುವುದು.<br>ಐ) ಸಹಕಾರ ಚಳುವಳಿಗೆ ತೀವ್ರ ರೀತಿಯಲ್ಲಿ ಹಾನಿಯುಂಟಾಗುವ ಸಂಭವವಿದ್ದಲ್ಲಿ ಅಥವಾ ತುರ್ತು ಕ್ರಮದ ಅವಶ್ಯಕತೆಯಿದ್ದಲ್ಲಿ, ಕಾರ್ಯಕಾರಿ ಸಮಿತಿಯ ನಿರ್ಣಯಕ್ಕೆ ಒಳಪಟ್ಟು, ಸೂಕ್ತ ಕ್ರಮ ತೆಗೆದುಕೊಳ್ಳತಕ್ಕದ್ದು. ಪರಂತು, ಇಂತಹ ನಿರ್ಣಯಗಳು, ಮಂಡಲಿಯು ನೀಡುವ ಮಾರ್ಗದರ್ಶಿಗಳಿಗೆ ಒಳಪಟ್ಟಿರತಕ್ಕದ್ದು.<br>ಐ) ಮಂಡಲಿಯು ನಿರ್ಣಯದ ಮೂಲಕ ಪ್ರಾಧಿಕೃತವಾದ ಇತರೆ ಯಾವುದೇ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.<br>5. **ಸಭೆಗಳು:**<br>ಸಂಚಾಲಕರು ಅಗತ್ಯಕ್ಕೆ ತಕ್ಕಷ್ಟು ಸಭೆಗಳನ್ನು ಕರೆಯಬಹುದು. ಆದರೆ ಕನಿಷ್ಠ ಪಕ್ಷ ಒಂದು ತಿಂಗಳಿಗೆ ಒಂದು ಸಭೆಯನ್ನು ಕರೆಯತಕ್ಕದ್ದು.<br>6. **ಪ್ರಾಂತೀಯ ನಿರ್ದೇಶಕರ ಸಮಿತಿಯ ಕಾರ್ಯವಿಧಾನ:**<br>ಮೇಲೆ ಉಪಬಂಧಿಸಿದ ವಿಷಯಗಳನ್ನು ಹೊರತುಪಡಿಸಿ ಉಳಿದ ವಿಷಯಗಳಿಗೆ ಸಂಬಂಧಿಸಿದಂತೆ ಮಂಡಲಿಯ ಸಭೆಯನ್ನು ನಡೆಸುವ ಕಾರ್ಯವಿಧಾನವು ಯಥೋಚಿತ ವ್ಯತ್ಯಾಸಗಳೊಂದಿಗೆ ಪ್ರಾಂತೀಯ ನಿರ್ದೇಶಕರ ಸಭೆಗಳನ್ನು ನಡೆಸುವುದಕ್ಕೆ ಅನ್ವಯವಾಗತಕ್ಕದ್ದು. | |
| 5 | **ಹೊಸ ಸೇರ್ಪಡೆ** | 35ಬಿ | **ಹೊಸ ಸೇರ್ಪಡೆ** | **ಕಾರ್ಯಕಾರಿ ಸಮಿತಿ ರಚನೆ:**<br>ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳನ್ನು ಇನ್ನಷ್ಟು ಸುವ್ಯವಸ್ಥಿತಗೊಳಿಸುವ ದೃಷ್ಟಿಯಿಂದ ಕಾರ್ಯಕಾರಿ ಸಮಿತಿಯನ್ನು ಆಡಳಿತ ಮಂಡಲಿಯು ಈ ಕೆಳಗಿನಂತೆ ಸಮಿತಿ ರಚಿಸಬಹುದಾಗಿರುತ್ತದೆ.<br>ಕಾರ್ಯಕಾರಿ ಸಮಿತಿಯು ಈ ಕೆಳಕಂಡ ಸದಸ್ಯರನ್ನು ಒಳಗೊಂಡಿರತಕ್ಕದ್ದು.<br>1. ಸಂಯುಕ್ತ ಸಹಕಾರಿಯ ಅಧ್ಯಕ್ಷರು ಕಾರ್ಯಕಾರಿ ಸಮಿತಿಯ ಅಧ್ಯಕ್ಷರಾಗಿರತಕ್ಕದ್ದು. | ಸಂಯುಕ್ತ ಸಹಕಾರಿಯ ಚಟುವಟಿಕೆಯನ್ನು ಇನ್ನಷ್ಟು ಪರಿಣಾಮಕಾರಿಯಾಗಿಸುವ ದೃಷ್ಟಿಯಿಂದ. |

| | | | | | |
|---|---|---|---|---|---|
| | | | | 2. ಸಂಯುಕ್ತ ಸಹಕಾರಿಯ ಅಧ್ಯಕ್ಷರು ಪ್ರತಿನಿಧಿಸುವ ಪ್ರಾಂತಕ್ಕೆ ಅಧ್ಯಕ್ಷರೇ ಆ ಪ್ರಾಂತದಿಂದ ಪ್ರಾಂತೀಯ ನಿರ್ದೇಶಕರ ಸಭೆಯ ಸಂಚಾಲಕರಾಗಿರುವುದರಿಂದ, ಅಧ್ಯಕ್ಷರು ಸಂಚಾಲಕರಾಗಿ ಮತ್ತು ಕಾರ್ಯಕಾರಿ ಸಮಿತಿಯ ಅಧ್ಯಕ್ಷರಾಗಿ ಪ್ರಾಂತವನ್ನು ಪ್ರತಿನಿಧಿಸತಕ್ಕದ್ದು. ಉಳಿದ ಮೂರು ವಿಭಾಗಗಳ ಪ್ರಾಂತೀಯ ನಿರ್ದೇಶಕರ ಸಭೆಯ ಸಂಚಾಲಕರು ಈ ಸಮಿತಿಯ ಸದಸ್ಯರುಗಳಾಗಿರತಕ್ಕದ್ದು.<br>3. ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರು ಸದಸ್ಯ ಕಾರ್ಯದರ್ಶಿಯಾಗಿರತಕ್ಕದ್ದು.<br>4. **ಕೋರಂ:**<br>ಸಮಿತಿಯ ಕೋರಂ 3 ಆಗಿರತಕ್ಕದ್ದು.<br>5. **ಸಭೆಗಳು:**<br>ಅ) ಸಮಿತಿಯ ಅಧ್ಯಕ್ಷರು ಅಗತ್ಯಕ್ಕೆ ತಕ್ಕಷ್ಟು ಸಭೆಗಳನ್ನು ಕರೆಯಬಹುದು. ಆದರೆ ಕನಿಷ್ಠ ಪಕ್ಷ 45 ದಿನಗಳಲ್ಲಿ ಒಂದು ಸಭೆಯನ್ನು ಕರೆಯತಕ್ಕದ್ದು.<br>ಆ) ಸಭೆಯ ಅಜೆಂಡಾ ಮತ್ತು ಟಿಪ್ಪಣಿಯನ್ನು ಐದು ದಿನಗಳ ಮುಂಚಿತವಾಗಿ ಸಮಿತಿಯ ಎಲ್ಲಾ ಸದಸ್ಯರಿಗೆ ಕಳುಹಿಸತಕ್ಕದ್ದು. ಪರಂತು ತುರ್ತು ಸಂದರ್ಭದಲ್ಲಿ ಮೂರು ದಿನಗಳ ಮುಂಚಿತವಾಗಿ ನೋಟೀಸನ್ನು ನೀಡಿ ಸಭೆಯನ್ನು ಕರೆಯಬಹುದಾಗಿರುತ್ತದೆ.<br>6. **ಕಾರ್ಯಕಾರಿ ಸಮಿತಿಯ ಕಾರ್ಯವ್ಯಾಪ್ತಿ:**<br>ಅ) ಕಾರ್ಯಕಾರಿ ಸಮಿತಿಯು ಸಹಕಾರಿಗಳ ಪ್ರಕರಣಗಳ ಕುರಿತು ವಿಸ್ತೃತವಾಗಿ ಚರ್ಚಿಸಿ ಸೌಹಾರ್ದ ಸಹಕಾರಿ ಅಧಿನಿಯಮ,1997ರ ಪ್ರಾವಧಾನಗಳಡಿ ಸಂಭಾವ್ಯ ಕಾನೂನು ಕ್ರಮದ ಕುರಿತು ನಿರ್ಣಯಿಸುವುದು.<br>ಆ) ಸಹಕಾರಿಯ ಕಾರ್ಯಚಟುವಟಿಕೆ ಕುರಿತು ಪರಿವೀಕ್ಷಣೆ ನಡೆಸಲು ನಿರ್ಣಯಿಸುವುದು.<br>ಇ) ಮಂಡಲಿಯು ನಿರ್ಣಯದ ಮೂಲಕ | |

| | | | | | |
|---|---|---|---|---|---|
| | | | | ಪ್ರಾಧಿಕೃತವಾದ ಇತರೆ ಯಾವುದೇ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.<br>ಈ) ನಿಗದಿತ ಅವಧಿಯೊಳಗೆ ಶಿಕ್ಷಣ ನಿಧಿ, ವಾರ್ಷಿಕ ಶುಲ್ಕ ಪಾವತಿಸದಿರುವ ಸಹಕಾರಿಯ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಲು ನಿರ್ಣಯಿಸುವುದು.<br>ಉ) ಕಾಯ್ದೆ ಕಲಂ 34ರಡಿಯ ವಿದ್ಯುಕ್ತ ಮಾಹಿತಿಯನ್ನು ನಿಗದಿತ ಅವಧಿಯೊಳಗೆ ಸಲ್ಲಿಸದಿರುವ ಸಹಕಾರಿಯ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಲು ನಿರ್ಣಯಿಸುವುದು.<br>ಊ) ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಯು ನಿರ್ವಹಿಸುವ ಎಲ್ಲಾ ರೀತಿಯ ಅಂಕಿ-ಅಂಶಗಳ ಸಂಗ್ರಹಣೆಗೆ ಮತ್ತು ಯುಕ್ತ ನಿರ್ವಹಣೆಗೆ ವ್ಯವಸ್ಥೆ ಮಾಡುವುದು.<br>ಋ) ನಿಗದಿತ ಅವಧಿಯೊಳಗೆ ವಾರ್ಷಿಕ ಸಾಮಾನ್ಯ ಸಭೆ ಅಥವಾ ಲೆಕ್ಕಪರಿಶೋಧನೆ ನಡೆಸದಿರುವ ಸಹಕಾರಿಯ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಲು ನಿರ್ಣಯಿಸುವುದು.<br>7. **ಕಾರ್ಯಕಾರಿ ಸಮಿತಿಯ ಕಾರ್ಯವಿಧಾನ:**<br>ಮೇಲೆ ಉಪಬಂಧಿಸಿದ ವಿಷಯಗಳನ್ನು ಹೊರತುಪಡಿಸಿ ಉಳಿದ ವಿಷಯಗಳಿಗೆ ಸಂಬಂಧಿಸಿದಂತೆ ಮಂಡಲಿಯ ಸಭೆಯನ್ನು ನಡೆಸುವ ಕಾರ್ಯವಿಧಾನವು ಯಥೋಚಿತ ವ್ಯತ್ಯಾಸಗಳೊಂದಿಗೆ ಕಾರ್ಯಕಾರಿ ಸಮಿತಿ ಸಭೆಗಳನ್ನು ನಡೆಸುವುದಕ್ಕೆ ಅನ್ವಯವಾಗತಕ್ಕದ್ದು. | |
| **6** | **ಹೊಸ ಸೇರ್ಪಡೆ** | **35ಸಿ** | **ಹೊಸ ಸೇರ್ಪಡೆ** | **ಪ್ರಾಂತೀಯ ಕಛೇರಿಗಳಿಗೆ ಅಧಿಕಾರ ಪ್ರತ್ಯಾಯೋಜನೆ:**<br>**ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯ ನಿರ್ಣಯಕ್ಕೆ ಒಳಪಟ್ಟು ಈ ಕೆಳಗಿನ ಅಧಿಕಾರಗಳನ್ನು ವಿಭಾಗೀಯ ಕಛೇರಿಗಳು ಹೊಂದಿರತಕ್ಕದ್ದು;**<br>1) ಸದಸ್ಯ ಸಹಕಾರಿಗಳ ಕಾರ್ಯಚಟುವಟಿಕೆಯ ಕುರಿತು ಪರಿವೀಕ್ಷಣೆ ನಡೆಸುವ ಅಧಿಕಾರ.<br>2) ಆಡಳಿತ ಮಂಡಲಿ, ಪ್ರಾಂತೀಯ ನಿರ್ದೇಶಕರ ಮತ್ತು | ವಿಭಾಗೀಯ ಕಛೇರಿಗಳಿಗೆ ಅಧಿಕಾರ ಪ್ರತ್ಯಾಯೋಜನೆ ಮಾಡುವ ಮೂಲಕ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವಂತೆ ಮಾಡುವ ದೃಷ್ಟಿಯಿಂದ |

| | | | | | |
|---|---|---|---|---|---|
| | | | | ಕಾರ್ಯಕಾರಿ ಸಮಿತಿ ಸಭೆಯಲ್ಲಿನ ನಿರ್ಣಯಗಳನ್ನು ಅನುಷ್ಠಾನಗೊಳಿಸುವ ಅಧಿಕಾರ.<br>3) ಸಹಕಾರಿಗಳು ನಿರ್ದಿಷ್ಟಪಡಿಸಿದ ಅವಧಿಯೊಳಗೆ ವಾರ್ಷಿಕ ಶುಲ್ಕ, ಶಿಕ್ಷಣ ನಿಧಿ ಪಾವತಿ ಮಾಡುವಂತೆ ನೋಡಿಕೊಳ್ಳುವುದು.<br>4) ಸಹಕಾರಿಗಳು ನಿರ್ದಿಷ್ಟಪಡಿಸಿದ ಅವಧಿಯೊಳಗೆ ಲೆಕ್ಕಪರಿಶೋಧನೆ, ಸಾಮಾನ್ಯ ಸಭೆ ನಡೆಸಿರುವುದನ್ನು ಖಚಿತಪಡಿಸಿಕೊಳ್ಳುವುದು ಮತ್ತು ಈ ಕುರಿತು ಅಗತ್ಯ ಕ್ರಮವಹಿಸುವುದು.<br>5) ಕಾಯ್ದೆ ಕಲಂ 34ರಡಿಯ ವಿದ್ಯುಕ್ತ ವರದಿಗಳನ್ನು ಪಡೆದುಕೊಳ್ಳುವುದು ಹಾಗೂ ವಿದ್ಯುಕ್ತ ವರದಿಗಳನ್ನು ಸಲ್ಲಿಸದಿರುವ ಸಹಕಾರಿಯ ವಿರುದ್ಧ ಕಾನೂನುರೀತ್ಯಾ ಕ್ರಮ ತೆಗೆದುಕೊಳ್ಳುವುದು.<br>6) ಆಡಳಿತ ಮಂಡಲಿ ಪದಾವಧಿಯ ಮುಕ್ತಾಯಕ್ಕೂ ಮುಂಚಿತವಾಗಿ ಚುನಾವಣೆ ನಡೆಸಲು ಸದಸ್ಯ ಸಹಕಾರಿಗಳಿಗೆ ಅಗತ್ಯ ಮಾರ್ಗದರ್ಶನ ಮಾಡುವುದು ಮತ್ತು ಚುನಾವಣೆಯನ್ನು ಸದಸ್ಯ ಸಹಕಾರಿಗಳು ನಡೆಸಿಕೊಳ್ಳಲು ಅಗತ್ಯ ಕ್ರಮವಹಿಸುವುದು.<br>7) ಸಹಕಾರಿಯ ಸಮಸ್ಯೆಗಳು, ದೂರುಗಳನ್ನು ಸ್ವೀಕರಿಸಿ ಸೂಕ್ತವಾಗಿ ತ್ವರಿತಗತಿಯಲ್ಲಿ ವಿಲೇವಾರಿ ಮಾಡುವ ಅಧಿಕಾರ.<br>8) ಪ್ರಾಂತೀಯ ನಿರ್ದೇಶಕರ ಸಮಿತಿಯ ನಿರ್ಣಯಕ್ಕೆ ಒಳಪಟ್ಟು ಪ್ರಾಂತೀಯ ಕಛೇರಿಯು ತನ್ನ ಅಗತ್ಯತೆಗೆ ಅನುಗುಣವಾಗಿ ಬ್ಯಾಂಕ್ ಖಾತೆಗಳನ್ನು ಪ್ರವರ್ತಿಸುವ ಅಧಿಕಾರ.<br>9) ವಾರ್ಷಿಕ ಶುಲ್ಕ, ಶಿಕ್ಷಣ ನಿಧಿಯನ್ನು ಸ್ವೀಕರಿಸುವ ಹಾಗೂ ಅದನ್ನು ಪ್ರತ್ಯೇಕವಾಗಿ ಬ್ಯಾಂಕ್ ಖಾತೆಯಲ್ಲಿ ನಿರ್ವಹಿಸುವ ಅಧಿಕಾರ.<br>10) ಪ್ರಾಂತದ ಸಹಕಾರಿಗಳಿಂದ ಲೆಕ್ಕಪರಿಶೋಧನಾ ವರದಿಗಳನ್ನು ತರಿಸಿಕೊಳ್ಳುವುದು.<br>11) ಸಹಕಾರ ಚಳುವಳಿಗೆ ಹಾನಿಯುಂಟಾಗುವ ಸಂಭವವಿದ್ದಲ್ಲಿ ಅಥವಾ ತುರ್ತು ಕ್ರಮದ | |

| | | | | | |
|---|---|---|---|---|---|
| | | | | ಅವಶ್ಯಕತೆಯಿದ್ದಲ್ಲಿ, ಸೂಕ್ತ ಕಾನೂನು ಕ್ರಮ ತೆಗೆದುಕೊಳ್ಳತಕ್ಕದ್ದು. ಪರಂತು, ಇಂತಹ ನಿರ್ಣಯಗಳು, ಮಂಡಲಿಯು ನೀಡುವ ಮಾರ್ಗದರ್ಶಿಗಳಿಗೆ ಒಳಪಟ್ಟಿರತಕ್ಕದ್ದು.<br>12) ಕಾಲ–ಕಾಲಕ್ಕೆ ಆಡಳಿತ ಮಂಡಲಿಯು ನಿರ್ಣಯದ ಮೂಲಕ ಅಧಿಕಾರ ಪ್ರತ್ಯಾಯೋಜಿಸಬಹುದು. | |
| **7** | **ಹೊಸ ಸೇರ್ಪಡೆ** | **35ಡಿ** | **ಹೊಸ ಸೇರ್ಪಡೆ** | ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯು ನಿರ್ಣಯದ ಮೂಲಕ ಒಕ್ಕೂಟ ಸಹಕಾರಿಗಳಿಗೆ ಸಂಯುಕ್ತ ಸಹಕಾರಿಯ ಯಾವುದೇ ತರಬೇತಿ ಕಾರ್ಯಕ್ರಮಗಳನ್ನು ಸಂಯುಕ್ತ ಸಹಕಾರಿಯ ಸಹಯೋಗದೊಂದಿಗೆ ಆಯೋಜಿಸುವ ಜವಬ್ದಾರಿಯನ್ನು ನೀಡಬಹುದು. | ತರಬೇತಿ ಕಾರ್ಯಕ್ರಮಗಳನ್ನು ಹೆಚ್ಚು ಪರಿಣಾಮಕಾರಿಯನ್ನಾಗಿಸುವ ಕಾರಣದಿಂದ |
| **8** | 57 | 57 | **ನಿಧಿಗಳ ಮೂಲಗಳು:**<br>ಸಂಯುಕ್ತ ಸಹಕಾರಿಯು ಈ ಕೆಳಕಂಡ ಮೂಲಗಳಿಂದ ನಿಧಿಗಳನ್ನು ಸಂಗ್ರಹಿಸಬಹುದು.<br>1) ಸದಸ್ಯ ಸಹಕಾರಿಗಳಿಂದ ಸಂದಾಯವಾದ ಸಹಕಾರ ಶಿಕ್ಷಣ ನಿಧಿ;<br>2) ಕಾಯ್ದೆ ಕಲಂ 62ರ ಪ್ರಕಾರವಾಗಿ ರಚಿಸಿದ ಸಂಯುಕ್ತ ಸಹಕಾರ ನಿಧಿ;<br>3) ಸದಸ್ಯ ಸಹಕಾರಿಗಳಿಂದಾಗಲಿ, ಇತರ ವಿತ್ತೀಯ ಸಂಸ್ಥೆಗಳಿಂದಾಗಲೀ, ರಾಷ್ಟ್ರೀಯ ಅಥವಾ ಅಂತಾರಾಷ್ಟ್ರೀಯ ಮೂಲಗಳಿಂದಾಗಲೀ ಪಡೆದುಕೊಂಡ ಸಾಲಗಳು.<br>4) ಸರ್ಕಾರದಿಂದ ಅಥವಾ ಇತರೆ ಯಾವುದೇ ಮೂಲಗಳಿಂದ ಸ್ವೀಕರಿಸಿದ ದೇಣಿಗೆ, ವಂತಿಗೆ, ದಾನ, ಸಹಾಯಧನ, ಸಾಲ ಇತ್ಯಾದಿಗಳು. | **ನಿಧಿಗಳ ಸಂಗ್ರಹಣೆ, ಹೂಡಿಕೆ ಮತ್ತು ವಿನಿಯೋಗ**<br>**1. ನಿಧಿಗಳ ಸಂಗ್ರಹಣೆ:**<br>ಸಂಯುಕ್ತ ಸಹಕಾರಿಯು ಈ ಕೆಳಕಂಡ ಮೂಲಗಳಿಂದ ನಿಧಿಗಳನ್ನು ಸಂಗ್ರಹಿಸಬಹುದು.<br>ಅ) ಸದಸ್ಯ ಸಹಕಾರಿಗಳಿಂದ ಸಂದಾಯವಾದ ಸಹಕಾರ ಶಿಕ್ಷಣ ನಿಧಿ;<br>ಆ) ಕಾಯ್ದೆ ಕಲಂ 62ರ ಪ್ರಕಾರವಾಗಿ ರಚಿಸಿದ ಸಂಯುಕ್ತ ಸಹಕಾರ ನಿಧಿ;<br>**ಇ) ಇ–ಸ್ಟ್ಯಾಂಪಿಂಗ್ ವ್ಯವಹಾರ ಮತ್ತು ಭದ್ರತಾ ಠೇವಣಿ;**<br>**ಈ) ಸದಸ್ಯ ಸಹಕಾರಿಗಳಿಂದಾಗಲಿ, ಇತರ ವಿತ್ತೀಯ ಸಂಸ್ಥೆಗಳಿಂದಾಗಲೀ ಅಥವಾ ಬ್ಯಾಂಕುಗಳಿಂದ, ರಾಷ್ಟ್ರೀಯ ಅಥವಾ ಅಂತಾರಾಷ್ಟ್ರೀಯ ಮೂಲಗಳಿಂದಾಗಲೀ ಪಡೆದುಕೊಂಡ ಸಾಲಗಳು.**<br>**ಉ) ಸಹಕಾರಿಯಿಂದ, ಸರ್ಕಾರದಿಂದ ಅಥವಾ ಇತರೆ ಯಾವುದೇ ಮೂಲಗಳಿಂದ ಸ್ವೀಕರಿಸಿದ ದೇಣಿಗೆ, ವಂತಿಗೆ, ದಾನ, ಸಹಾಯಧನ, ಸಾಲ ಇತ್ಯಾದಿಗಳು.**<br>**ಊ) ಯಾವುದೇ ಮೂಲದಿಂದ ಸಂಯುಕ್ತ ಸಹಕಾರಿಗೆ ಸಂದಾಯವಾದ ಮೊತ್ತ;**<br>**2. ನಿಧಿಗಳ ಹೂಡಿಕೆ ಮತ್ತು ವಿನಿಯೋಗ:** | ಸಹಕಾರಿಗಳಿಂದಲೂ ಸಹ ದೇಣಿಗೆ, ವಂತಿಗೆ, ದಾನ, ಸಹಾಯಧನ, ಸಾಲವನ್ನು ಪಡೆಯಲು ಪ್ರಾವಧಾನ ಕಲ್ಪಿಸುವ ದೃಷ್ಠಿಯಿಂದ. |

| | | | | | |
|---|---|---|---|---|---|
| | | | | ಸಂಯುಕ್ತ ಸಹಕಾರಿಯ ನಿಧಿಗಳ ಹೂಡಿಕೆ ಮತ್ತು ವಿನಿಯೋಗದ ಕುರಿತು ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯು ನಿರ್ಣಯಿಸಲು ಸಕ್ಷಮವಾಗಿರುತ್ತದೆ. | |
| 9 | 63 | 63 | ಆಡಳಿತಗಾರರು ಮತ್ತು ವಿಶೇಷಾಧಿಕಾರಿಗಳು :<br>1) ಸದಸ್ಯ ಸಹಕಾರಿಗೆ ಕಲಂ 38 ರಡಿ ಆಡಳಿತಗಾರನನ್ನು ಅಥವಾ ಕಲಂ 38ಎ ರಡಿ ವಿಶೇಷಾಧಿಕಾರಿಯನ್ನು ನಿಯುಕ್ತಿಗೊಳಿಸುವ ಸಂದರ್ಭ ಬಂದಲ್ಲಿ ಮಂಡಲಿಯು ಅನುಮೋದಿಸಿದ ಪಟ್ಟಿಯಿಂದ ಒಬ್ಬನನ್ನು ನೇಮಿಸಬಹುದು.<br>2) ವಿವಿಧ ಸಪಕಾರಿಗಳಿಗೆ, ಆಯಾ ವಿಧ ಅಥವಾ ಕ್ಷೇತ್ರದಲ್ಲಿ ಪರಿಣತರಾಗಿರುವ ಹಾಗೂ ಆಡಳಿತಾತ್ಮಕ ಅನುಭವವಿರುವ ವ್ಯಕ್ತಿಗಳ ಪಟ್ಟಿಯೊಂದನ್ನು ಮಂಡಲಿಯು ಸಿದ್ಧಪಡಿಸಬಹುದು.<br>3) ಆಡಳಿತಗಾರನು ಅಥವಾ ವಿಶೇಷಾಧಿಕಾರಿಯು ಸಹಕಾರಿಯ ಮಂಡಲಿಯ ಎಲ್ಲಾ ಕಾರ್ಯ ಹಾಗೂ ಜವಾಬ್ದಾರಿಯನ್ನು ಹೊಂದಿರಕ್ಕದ್ದು. ಮತ್ತು ಇಂಥ ಕಾರ್ಯವನ್ನು ಸಂಯುಕ್ತ ಸಹಕಾರಿಯ ನಿಯಂತ್ರಣದಡಿ ನಿರ್ವಹಿಸತಕ್ಕದ್ದು.<br>4) ಆಡಳಿಗಾರನ ಅಥವಾ ವಿಶೇಷಾಧಿಕಾರಿಯ ಅಪೇಕ್ಷೆ ಮೇರೆಗೆ ಅಥವಾ ಬೇರೆ ಯಾವುದೇ ಕಾರಣಕ್ಕೆ ಮಂಡಲಿಯು ಅವನ ಸ್ಥಾನಕ್ಕೆ ಇನ್ನೊಬ್ಬರನ್ನು ನಿಯುಕ್ತಿಗೊಳಿಸಲು ಸಮರ್ಥವಾಗಿರುತ್ತದೆ. | ಆಡಳಿತಗಾರರು ಮತ್ತು ವಿಶೇಷಾಧಿಕಾರಿಗಳು :<br>1. ಆಡಳಿತಗಾರರು ಮತ್ತು ವಿಶೇಷಾಧಿಕಾರಿಗಳ ಪಟ್ಟಿ :<br>ಅ) ಸದಸ್ಯ ಸಹಕಾರಿಗೆ ಕಲಂ 38 ರಡಿ ಆಡಳಿತಗಾರನನ್ನು ಅಥವಾ ಕಲಂ 38ಎ ರಡಿ ವಿಶೇಷಾಧಿಕಾರಿಯನ್ನು ನಿಯುಕ್ತಿಗೊಳಿಸುವ ಸಂದರ್ಭ ಬಂದಲ್ಲಿ ಮಂಡಲಿಯು ಅನುಮೋದಿಸಿದ ಪಟ್ಟಿಯಿಂದ ಒಬ್ಬನನ್ನು ನೇಮಿಸಬಹುದು.<br>ಆ) ವಿವಿಧ ಸಪಕಾರಿಗಳಿಗೆ, ಆಯಾ ವಿಧ ಅಥವಾ ಕ್ಷೇತ್ರದಲ್ಲಿ ಪರಿಣತರಾಗಿರುವ ಹಾಗೂ ಆಡಳಿತಾತ್ಮಕ ಅನುಭವವಿರುವ ವ್ಯಕ್ತಿಗಳ ಪಟ್ಟಿಯೊಂದನ್ನು ಮಂಡಲಿಯು ಸಿದ್ಧಪಡಿಸಬಹುದು.<br>2. ವಿಶೇಷಾಧಿಕಾರಿಯ ಅಧಿಕಾರ ಮತ್ತು ಕರ್ತವ್ಯಗಳು:<br>ಅ) ವಿಶೇಷಾಧಿಕಾರಿಯು, ಸಂಯುಕ್ತ ಸಹಕಾರಿಯ ನಿಯಂತ್ರಣಕ್ಕೆ ಒಳಪಟ್ಟು ಸಹಕಾರಿಯ ಆಡಲಿತ ಮಂಡಲಿಯ ಅಥವಾ ಸಹಕಾರಿಯ ಪದಾಧಿಕಾರಿಯ ಎಲ್ಲಾ ಅಧಿಕಾರಗಳನ್ನು ಹೊಂದಿರತಕ್ಕದ್ದು ಮತ್ತು ಸಹಕಾರಿಯ ಹಾಗೂ ಸದಸ್ಯರ ಹಿತದೃಷ್ಟಿಯಿಂದ ಅಗತ್ಯವಾಗಬಹುದಾದ ಎಲ್ಲಾ ಕ್ರಮಗಳನ್ನು ಕೈಗೊಳ್ಳತಕ್ಕದ್ದು.<br>ಆ) ಸಹಕಾರಿಯಲ್ಲಿ ಗಂಭಿರ ಹಣಕಾಸು ಅಥವಾ ವಂಚನೆಯನ್ನು ಎಸಗಿರುವ ಸಂದರ್ಭದಲ್ಲಿ ವಿಶೇಷಾಧಿಕಾರಿಯು;<br>ಇ) ವಿಶೇಷಾಧಿಕಾರಿಯು ಸಹಕಾರಿಯ ಸ್ವತ್ತುಗಳನ್ನು ಮತ್ತು ದಾಖಲೆಗಳನ್ನು ತನ್ನ ಸ್ವಾಧೀನದಲ್ಲಿಟ್ಟುಕೊಳ್ಳಲು ಹಕ್ಕಿಲ್ಲದ ಯಾರೇ ವ್ಯಕ್ತಿಯು, ಸಹಕಾರಿಯ ಪುಸ್ತಕಗಳು, ಲೆಕ್ಕಗಳು, | ಅಧಿನಿಯಮದಲ್ಲಿ ವಿಶೇಷಾಧಿಕಾರಿಗಳ ಅಧಿಕಾರ ಮತ್ತು ಕರ್ತವ್ಯಗಳ ಕುರಿತು ಸ್ಪಷ್ಟತೆ ಇಲ್ಲದಿರುವುದರಿಂದ. |

| | | | | | |
|---|---|---|---|---|---|
| | | | | ದಾಖಲೆಗಳು, ಠೇವಣಿಗಳು, ನಗದು ಮತ್ತು ಇತರ ಸ್ವತ್ತುಗಳು, ಚರಾಸ್ತಿಗಳು ಅಥವಾ ಸ್ಥಿರಾಸ್ತಿಗಳು (ಈ ಪ್ರಕರಣದಲ್ಲಿ ಸಹಕಾರಿಯ ದಾಖಲೆಗಳು ಮತ್ತು ಸ್ವತ್ತುಗಳು ಎಂದು ಉಲ್ಲೇಖಿಸಲಾಗಿದೆ) ಸ್ವಾಧೀನಕ್ಕೆ ತೆಗೆದುಕೊಳ್ಳುವುದನ್ನು ಪ್ರತಿರೋಧಿಸಿದ್ದರೆ ಅಥವಾ ತಡೆದರೆ, ವಿಶೇಷಾಧಕಾರಿಯು ಸಹಕಾರಿಯ ಅಂಥ ದಾಖಲೆಗಳನ್ನು ಮತ್ತು ಸ್ವತ್ತುಗಳನ್ನು ಇಟ್ಟಿರುವ ಯಾವುದೇ ಆವರಣವನ್ನು ಅಥವಾ ಸ್ಥಳವನ್ನು ಪ್ರವೇಶಿಸಲು, ಶೋಧಿಸಲು ಅಥವಾ ಮುರಿದು ತೆಗೆಯಲು ಮತ್ತು ಸಹಕಾರಿಯ ಯಾವುದೇ ಅಂಥ ದಾಖಲೆಗಳನ್ನು ಮತ್ತು ಸ್ವತ್ತುಗಳನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಲು ಸಂಯುಕ್ತ ಸಹಕಾರಿಯಿಂದ ಅನುಮತಿಯನ್ನು ಪಡೆದುಕೊಳ್ಳತಕ್ಕುದು.<br>ಈ) (1)ನೇ ಉಪ-ಪ್ರಕರಣದ ನಿಯಮದ ಮೇರೆಗಿನ ವ್ಯವಹರಣೆಗಳ ಉದ್ದೇಶಕ್ಕಾಗಿ ಮೇಲೆ ಹೇಳಿದ ಅನುಮತಿಯು ಅದಕ್ಕೆ ಸಂಬಂಧಪಟ್ಟ ದಾಖಲೆಗಳು ಮತ್ತು ಸ್ವತ್ತುಗಳು ಸಹಕಾರಿಗೆ ಸೇರಿದ್ದು ಎಂಬುದಕ್ಕೆ ನಿರ್ಣಾಯಕ ಸಾಕ್ಷ್ಯವಾಗಿರತಕ್ಕುದು.<br>ಉ) ಶೋಧನೆಗಳಿಗೆ ಮತ್ತು ಸ್ವಾಧೀನಕ್ಕೆ ತೆಗೆದುಕೊಳ್ಳುವುದಕ್ಕೆ ಸಂಬಂಧಪಟ್ಟ 1973ರ ದಂಡ ಪ್ರಕ್ರಿಯಾ ಸಂಹಿತೆಯ 100, 101 ಮತ್ತು 102ನೇ ಪ್ರಕರಣದ ಉಪಬಂಧಗಳು ಈ ಪ್ರಕರಣದ ಮೇರೆಗಿನ ಶೋಧನೆಗೆ ಮತ್ತು ಸ್ವಾಧೀನಕ್ಕೆ ತೆಗೆದುಕೊಳ್ಳುವುದಕ್ಕೆ ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯವಾಗತಕ್ಕುದು.<br>ಊ) ಸಹಕಾರಿಗೆ ಸೇರಿರುವ ಬ್ಯಾಂಕ್ ಖಾತೆಗಳಿಗೆ ಸಂಬಂಧಿಸಿದಂತೆ ವಿಶೇಷಾಧಿಕಾರಿಯು ಅಧಿಕೃತ ವ್ಯಕ್ತಿಯಾಗಿದ್ದು, ವ್ಯವಹಾರ ನಡೆಸಲು ಮತ್ತು ಸಹಕಾರಿಯ ಹಾಗೂ ಸದಸ್ಯರ ಹಿತದೃಷ್ಟಿಯಿಂದ ಅಗತ್ಯವಾಗಬಹುದಾದ ಎಲ್ಲಾ ಕ್ರಮಗಳನ್ನು | |

| | | | | | |
|---|---|---|---|---|---|
| | | | | ಕೈಗೊಳ್ಳುವ ಅಧಿಕಾರವನ್ನು ಹೊಂದಿರತಕ್ಕದ್ದು. ಸಂದರ್ಭಾನುಸಾರ ಸಹಕಾರಿಯ ಹೆಸರಿನಲ್ಲಿ ಬ್ಯಾಂಕಿನಲ್ಲಿ ಖಾತೆಯನ್ನು ತೆರದು ವ್ಯವಹರಿಸಲು ಸಕ್ಷಮನಾಗಿರತಕ್ಕದ್ದು.<br>ಐ) ವಿಶೇಷಾಧಿಕಾರಿಯು ಸಹಕಾರಿಯ ನಿಧಿಯನ್ನು ಸಹಕಾರಿಯ ಸಿಬ್ಬಂದಿಗಳಿಗೆ ವೇತನ ನೀಡಲು, ಹಣಕಾಸು ಅಥವಾ ವಂಚನೆಯನ್ನು ಎಸಗಿರುವ ಸಹಕಾರಿಯ ನಿರ್ದೇಶಕರು ವಿರುದ್ದ ನ್ಯಾಯಿಕ ಪ್ರಕ್ರಿಯೇ ಅನುಸರಿಸುವುದು ಸೇರಿದಂತೆ ಇತರೆ ಅನುಷಂಗಿಕ ಖರ್ಚುಗಳಿಗೆ ಬಳಸಬಹುದು.<br>ಎ) ಮೇಲೆ ತಿಳಿಸಿದ ವಿಶೇಷಾಧಿಕಾರಿಯ ಕರ್ತವ್ಯ ನಿರ್ವಹಣೆಗೆ ಅಗತ್ಯವಾದ ಮೊತ್ತ/ನಿಧಿಗಳು ಸಹಕಾರಿಯಲ್ಲಿ ಲಭ್ಯವಿಲ್ಲದಿದ್ದಲ್ಲಿ/ಪಡೆದುಕೊಳ್ಳಲು ಸಾದ್ಯವಿರದಂತಹ ಸನ್ನಿವೇಶವಿದ್ದಲ್ಲಿ ಕರ್ತವ್ಯ ನಿರ್ವಹಣೆಗೆ ಅಗತ್ಯವಾದ ವೆಚ್ಚ/ಮೊತ್ತವನ್ನು ಅಥವಾ ವಿಶೇಷಾಧಿಕಾರಿಯ ಗೌರವಧನವನ್ನು ಸಂಯುಕ್ತ ಸಹಕಾರಿಯ ನಿಧಿಯಿಂದ ಪಾವತಿಸಬಹುದು. | |
| 10 | ಹೊಸ ಸೇರ್ಪಡೆ | 63ಎ | | **ಸಮಾಪನೆಯ ವೆಚ್ಚ:**<br>ಯಾವುದೇ ಸಹಕಾರಿಯ ಸಮಾಪನೆಗೆ ಆದೇಶವಾಗಿದ್ದು, ಸಹಕಾರಿಯಲ್ಲಿ ಸಮಾಪನೆಯ ಕರ್ತವ್ಯ ನಿರ್ವಹಣೆಗೆ ಅಗತ್ಯವಾದ ಮೊತ್ತ/ನಿಧಿಗಳು ಲಭ್ಯವಿಲ್ಲದಿದ್ದಲ್ಲಿ/ಪಡೆದುಕೊಳ್ಳಲು ಸಾದ್ಯವಿರದಂತಹ ಸನ್ನಿವೇಶವಿದ್ದಲ್ಲಿ ಕರ್ತವ್ಯ ನಿರ್ವಹಣೆಗೆ ಅಗತ್ಯವಾದ ವೆಚ್ಚ/ಮೊತ್ತವನ್ನು ಅಥವಾ ಸಮಾಪಕನ ಗೌರವಧನವನ್ನು ಸಂಯುಕ್ತ ಸಹಕಾರಿಯ ನಿಧಿಯಿಂದ ಪಾವತಿಸಬಹುದು. | ಸಮಾಪನೆಯ ಕಾರ್ಯವನ್ನು ಪರಿಣಾಮಕಾರಿಯಾಗಿ ಮತ್ತು ಶೀಘ್ರವಾಗಿ ಕೈಗೊಳ್ಳಲು ಅನುಕೂಲ ಕಲ್ಪಿಸುವ ದೃಷ್ಠಿಯಿಂದ |
| 11 | 65 | 65 | ಕಾಯ್ದೆ ಮತ್ತು ನಿಯಮಗಳಿಗೆ ಒಳಪಟ್ಟು ಸಂಯುಕ್ತ ಸಹಕಾರಿಯ ಉಪವಿಧಿಗಳನ್ನು ಸಾಮಾನ್ಯ ಸಭೆಯಲ್ಲಿ ಹಾಜರಿದ್ದ ಸದಸ್ಯರ ಪೈಕಿ ಎರಡನೆ ಮೂರರಷ್ಟು ಬಹುಮತದಿಂದ ಮಾಡಬಹುದು. ಆದರೆ ಅಂತಹ ಸಭೆಯ ನೋಟೀಸನ್ನು ಪ್ರಸ್ತಾಪಿತ ತಿದ್ದುಪಡಿಗಳ ವಿವರಗಳ ಸಹಿತ ಎಲ್ಲಾ ಅರ್ಹ ಸದಸ್ಯರಿಗೆ ಸಭೆಯ | ಕಾಯ್ದೆ ಮತ್ತು ನಿಯಮಗಳಿಗೆ ಒಳಪಟ್ಟು ಸಂಯುಕ್ತ ಸಹಕಾರಿಯ ಉಪವಿಧಿಗಳನ್ನು ಸಾಮಾನ್ಯ ಸಭೆಯಲ್ಲಿ ಹಾಜರಿದ್ದ ಸದಸ್ಯರ ಪೈಕಿ **ಮೂರನೇ ಎರಡರಷ್ಟು** ಬಹುಮತದಿಂದ ಮಾಡಬಹುದು. ಆದರೆ ಅಂತಹ ಸಭೆಯ ನೋಟೀಸನ್ನು ಪ್ರಸ್ತಾಪಿತ ತಿದ್ದುಪಡಿಗಳ ವಿವರಗಳ ಸಹಿತ ಎಲ್ಲಾ ಅರ್ಹ ಸದಸ್ಯರಿಗೆ ಸಭೆಯ ಇಪ್ಪತ್ತು ಸ್ಪಷ್ಟ | ತಾಂತ್ರಿಕ ಕಾರಣ |

| | | | | | |
|---|---|---|---|---|---|
| | | | ಇಪ್ಪತ್ತು ಸ್ಪಷ್ಟ ದಿನಗಳ ಮುಂಚಿತವಾಗಿ ನೀಡಿರಬೇಕು. ಉಪವಿಧಿಗಳ ಸೇರ್ಪಡೆಗಳು, ರದ್ದತಿಗಳು ಮತ್ತು ತಿದ್ದುಪಡಿಗಳು ರಿಜಿಸ್ಟ್ರಾರನಿಂದ ಅನುಮೋದನೆಯಾದ ದಿನದಿಂದ ಜಾರಿಗೆ ಬರುತ್ತವೆ. | ದಿನಗಳ ಮುಂಚಿತವಾಗಿ ನೀಡಿರಬೇಕು. ಉಪವಿಧಿಗಳ ಸೇರ್ಪಡೆಗಳು, ರದ್ದತಿಗಳು ಮತ್ತು ತಿದ್ದುಪಡಿಗಳು ರಿಜಿಸ್ಟ್ರಾರನಿಂದ ಅನುಮೋದನೆಯಾದ ದಿನದಿಂದ ಜಾರಿಗೆ ಬರುತ್ತವೆ. | |
| **12** | 71 | 71 | **ಅಮೂಲ್ಯ ದಾಖಲೆಗಳ ಸಂರಕ್ಷಣಾ ವಿಧಾನ:** ಮಂಡಳಿಯು ನಿರ್ಧರಿಸಿರುವಂತೆ ತುರ್ತುಪರಿಸ್ಥಿತಿಯಲ್ಲಿ ಸಂಯುಕ್ತ ಸಹಕಾರಿಯ ಭದ್ರತೆಯಲ್ಲಿರುವ ಯಾವುದೇ ಬೀಗದ ಕೈ ಒಳಗೊಂಡ ಸ್ವತ್ತು, ದಸ್ತಾವೇಜುಗಳು, ಆಧಾರ ಪತ್ರಗಳು ಇವುಗಳನ್ನು ಸರಕಾರದ ಖಜಾನೆ ಅಥವಾ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಮತ್ತು ಅದರ ಪೂರಕ ಬ್ಯಾಂಕುಗಳಲ್ಲಿ ಇಡತಕ್ಕದ್ದು. | **ಅಮೂಲ್ಯ ದಾಖಲೆಗಳ ಸಂರಕ್ಷಣಾ ವಿಧಾನ:** ಸಂಯುಕ್ತ ಸಹಕಾರಿಯ ಭದ್ರತೆಯಲ್ಲಿರುವ ಯಾವುದೇ ಬೀಗದ ಕೈ ಒಳಗೊಂಡ ಸ್ವತ್ತು, ದಸ್ತಾವೇಜುಗಳು, ಆಧಾರ ಪತ್ರಗಳು ಇವುಗಳನ್ನು ಆಡಳಿತ ಮಂಡಲಿಯು ನಿರ್ಧರಿಸಿದಂತೆ ಸಂಗ್ರಹಿಸಬಹುದು. | ಪ್ರಾಯೋಗಿಕ ತೊಂದರೆಯನ್ನು ನಿವಾರಿಸುವ ಸಲುವಾಗಿ |
| **13** | **ಹೊಸ ಸೇರ್ಪಡೆ** | 71ಎ | ಹೊಸ ಸೇರ್ಪಡೆ | **ಪೂರಕ ನಿಯಮಗಳ ರಚನೆ:** ಸಾಮಾನ್ಯ ನಿಕಾಯದ ಅಧಿಕಾರಗಳಿಗೆ ಬಾಧಕವಾಗದಂತೆ ಸಂಯುಕ್ತ ಸಹಕಾರಿಯ ವ್ಯವಹಾರಗಳ ಸರಿಯಾದ ನಿರ್ವಹಣೆ ಮತ್ತು ಉದ್ದೇಶಗಳ ಸಾಧನೆಯ ಹಿತದೃಷ್ಟಿಯಿಂದ ಅಗತ್ಯವಾದಂಥ ಪೂರಕ/ಇತರ ನಿಯಮಗಳನ್ನು ಆಡಳಿತ ಮಂಡಲಿಯು ರಚಿಸಬಹುದು. | ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಯನ್ನು ಹೆಚ್ಚು ಪರಿಣಾಮಕಾರಿಯಾಗಿ ನಿರ್ವಹಿಸುವ ದೃಷ್ಟಿಯಿಂದ |
| **14** | 72 | 72 | **ಉಪವಿಧಿಗಳ ವ್ಯಾಖ್ಯಾನ:** ಕಾಯ್ದೆ, ನಿಯಮಗಳ ಮತ್ತು ಈ ಉಪವಿಧಿಗಳ ರಚನಾ ಕ್ರಮದಲ್ಲಿ ಅಥವಾ ವ್ಯಾಖ್ಯಾನದಲ್ಲಿ ಸಂಶಯಗಳು ಬಂದಾಗ ರಿಜಿಸ್ಟ್ರಾರನ ಅಭಿಪ್ರಾಯವೇ ಅಂತಿಮವೆಂದು ಪರಿಗಣಿಸತಕ್ಕದ್ದು. | **ಕಾಯ್ದೆ, ನಿಯಮಗಳ ಉಪವಿಧಿಗಳ ವ್ಯಾಖ್ಯಾನ:** ಕಾಯ್ದೆ, ನಿಯಮಗಳ ಮತ್ತು ಈ ಉಪವಿಧಿಗಳ ರಚನಾ ಕ್ರಮದಲ್ಲಿ ಅಥವಾ ವ್ಯಾಖ್ಯಾನದಲ್ಲಿ ಸಂಶಯಗಳು ಬಂದಾಗ ರಿಜಿಸ್ಟ್ರಾರನ ಅಭಿಪ್ರಾಯವೇ ಅಂತಿಮವೆಂದು ಪರಿಗಣಿಸತಕ್ಕದ್ದು ಮತ್ತು ಸಂಬಂಧಪಟ್ಟವರಿಗೆ ಬಂಧಕಕವಾಗಿರತಕ್ಕದ್ದು. | ತಾಂತ್ರಿಕ ಕಾರಣದಿಂದ |

Karnataka State Souharda Federal Co-operative Ltd.
Reg. No. RSR / SOU / ACT / 136 / Regn. 051 / 2001-02 dated: 04-01-2002
Bengaluru

(...ಗೌಡ ಜಿ.ಪಾಟೀಲ್)
...ವ್ಯವಸ್ಥಾಪಕ ನಿರ್ದೇಶಕರು